## ದಿನಾಂಕ: 21.09.2024ರಂದು ನಡೆದ ಪ್ರಶಾಸನ ಸಮಿತಿಯ 72ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ 72ನೆಯ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 21-09-2024 ಶನಿವಾರ ಬೆಳಿಗ್ಗೆ 11.30 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕರೆಯಲಾಗಿತ್ತು.

### ಸಭೆಯಲ್ಲಿ ಹಾಜರಿದ್ದರು:

1. ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಧ್ಯಕ್ಷರು
2. ಶ್ರೀ ಏಕೇಶ ಬಾಬು, ಉಪಕಾರ್ಯದರ್ಶಿಗಳು, ಉನ್ನತಶಿಕ್ಷಣ ಇಲಾಖೆ – ಸದಸ್ಯರು
3. ಡಾ. ಆರ್. ಶ್ರೀಧರ ಶಾಸ್ತ್ರಿ ಸೂರಿ, ಪ್ರಾಧ್ಯಾಪಕರು(ನಿ), ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು – ಸದಸ್ಯರು
4. ಶ್ರೀಮತಿ ಸಮತಾ ಹೊಸಪೇಟೆ, "ಬಾಲಾಜಿ", ಕುವೆಂಪು ನಗರ ಬಸ್ ನಿಲ್ದಾಣದ ಎದುರುಗಡೆ, ಹನುಮಾನ್ ನಗರ, ಬೆಳಗಾವಿ – 19 – ಸದಸ್ಯರು
5. ಡಾ. ಬಂಗಾರಮ್ಮ, ಕೆ. ನಂ–126, ಶಾಂತಿನಗರ, ನಾಗರತ್ನಮ್ಮ ಬಡಾವಣೆ, ಶಿವಮೊಗ್ಗ. 577201. – ಸದಸ್ಯರು
6. ಡಾ. ಶಿವಲಿಂಗಯ್ಯ, 'Shrungara' No. 9– 75/3 (20) Kankandy, 'B' BAJAL Post, Mangalore 575007 – ಸದಸ್ಯರು
7. ಡಾ. ಮುನೀರ್ ಅಹಮ್ಮದ್ ನಂ–403, 38ಎ ಕ್ರಾಸ್, 26ನೇ ಮೇನ್, 9ನೇ ಬ್ಲಾಕ್, ಜಯನಗರ, ಬೆಂಗಳೂರು– 560041 – ಸದಸ್ಯರು
8. ಶ್ರೀ ಬಸಪ್ಪ ಡೊಂಕಬಳ್ಳಿ, #302/302 ಶ್ರೀನಿಧಿ ನಿಲಯ, ಬೈರಪ್ಪ ಬಿಲ್ಡಿಂಗ್, 4ನೇ ಅಡ್ಡರಸ್ತೆ, ರಾಮಮಂದಿರ ರಸ್ತೆ, ಕೊಡಿಗೆಹಳ್ಳಿ, ಬೆಂಗಳೂರು– 560092 – ಸದಸ್ಯರು
9. ಶ್ರೀ ಹನುಮಂತನಾಥ ಸ್ವಾಮೀಜಿ, ಪೀಠಾಧ್ಯಕ್ಷರು, ಕುಂಚಿಟಿಗರ ಮಹಾ ಸಂಸ್ಥಾನ ಮಠ (ರಿ.), ನರಸಿಂಹಗಿರಿ ಕ್ಷೇತ್ರ, ಕೊರಟಗೆರೆ, ತುಮಕೂರು – 572129 – ಸದಸ್ಯರು
10. ಶ್ರೀ ನಾರಾಯಣ ಯಾಜಿ ಬಿನ್ ರಾಮ ಯಾಜಿ, ಕೆ.ಹೆಚ್.ಬಿ ಕಾಲೋನಿ, ಪ್ರಭಾತ ನಗರ, ಹೊನ್ನಾವರ, ಉತ್ತರ ಕನ್ನಡ–581334 – ಸದಸ್ಯರು
11. ಶ್ರೀ ವಿಶ್ವನಾಥ ಪಿ. ಹಿರೇಮಠ, ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ. – ಸದಸ್ಯ ಕಾರ್ಯದರ್ಶಿಗಳು

### ಗೈರು ಹಾಜರಾದವರು:

1. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ – ಸದಸ್ಯರು
2. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) – ಸದಸ್ಯರು
3. ಆಯುಕ್ತರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ – ಸದಸ್ಯರು
4. ಪ್ರೊ. ರಜನೀಶ ಕುಮಾರ ಮಿಶ್ರ, ಸಂಸ್ಕೃತ ಮತ್ತು ಇಂಡಿಕ್ ಅಧ್ಯಯನ ವಿಭಾಗ, ಜವಾಹರಲಾಲ ನೆಹರು ವಿಶ್ವವಿದ್ಯಾಲಯ, ನವದೆಹಲಿ – 110067 – ಸದಸ್ಯರು
5. ಶ್ರೀ ಪ್ರದೀಪ್ ಈಶ್ವರ್, ಮಾನ್ಯ ವಿಧಾನಸಭಾ ಸದಸ್ಯರು, ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರ, ನಂ–516, ಪೆರೇಸಂದ್ರ ಗ್ರಾಮ, ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಬಳ್ಳಾಪುರ– 562104. – ಸದಸ್ಯರು

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು. ನೂತನವಾಗಿ ನಾಮನಿರ್ದೇಶಿತ ಸದಸ್ಯರು ಪರಸ್ಪರ ತಮ್ಮನ್ನು ಪರಿಚಯಿಸಿಕೊಂಡರು. ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ ಕಾರ್ಯಪ್ರಗತಿಯನ್ನು ಸಂಕ್ಷಿಪ್ತವಾಗಿ ಸಭೆಗೆ ಪರಿಚಯಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ವಿ. ಸಂ. | ವಿಷಯ ಮತ್ತು ಟಿಪ್ಪಣಿ |
|---|---|
| **ವಿಷಯ 01** | **ಪ್ರಶಾಸನ ಸಮಿತಿ 71ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ಪ್ರಶಾಸನ ಸಮಿತಿ 71ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 14.08.2024ರಂದು ನಡೆಯಿತು. ಸಭೆಯ ನಿರ್ಣಯದ ಪ್ರಶಾಸನ ಸಮಿತಿ 71ನೇ ಸಭೆಯು ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಪ್ರಶಾಸನ ಸಮಿತಿ 71ನೇ ಸಭೆಯ ನಿರ್ಣಯದ ಅನುಪಾಲನಾ ವರದಿಯನ್ನು ಸಭೆಯು ಅನುಯಮೋದಿಸಿತು. ಹಾಗೂ ವಿಷಯ ಸಂಖ್ಯೆ: 16ಕ್ಕೆ ಸಂಬಂಧಿಸಿದಂತೆ, ಗ್ರಂಥಾಲಯ ಇಲಾಖೆಯಲ್ಲಿ ಅನುಸರಿಸುವ ಮಾನದಂಡವನ್ನು ಅಳವಡಿಸಿಕೊಂಡು ಕ್ರಮವಹಿಸಲು ಹಿಂದಿನ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಆದರೆ, ಸಂಸ್ಕೃತ ಪುಸ್ತಕಗಳ ಪ್ರಕಾಶಕರು ವಿರಳವಾಗಿದ್ದು, ಹೆಚ್ಚಿನ ಪುಸ್ತಕಗಳಿಗೆ ಒಂದೇ ಪ್ರಕಾಶಕರಿರುತ್ತಾರೆ. ಅಲ್ಲದೇ ಕೆಲವು ನಿರ್ದಿಷ್ಟ ವ್ಯಾಖ್ಯಾನದ ಪುಸ್ತಕಗಳು ಅವಶ್ಯವಿರುತ್ತದೆ. ಇಂತಹ ವಿಶೇಷ ಸಂದರ್ಭದಲ್ಲಿ ಟೆಂಡರ್ ಮೂಲಕ ಪುಸ್ತಕಗಳನ್ನು ಖರೀದಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ವಿಶ್ವವಿದ್ಯಾಲಯದ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕತೆಯಿರುವ ಪುಸ್ತಕಗಳನ್ನು ಕೆ.ಟಿ.ಪಿ.ಪಿ. ಅಧಿನಿಯಮ 1999ರ 4ಬಿ ಪ್ರಕಾರ ಖರೀದಿಸಲು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ದಿ: 19.06.2024ರಂದು ಸಭೆ ಸೇರಿ, ಏಕ ಪ್ರಕಾಶನದ ಪುಸ್ತಕಗಳನ್ನು ಒಂದೇ ದರಪಟ್ಟಿಯ ಮೂಲಕ ಖರೀದಿಸಲು ಶಿಫಾರಸ್ಸು ಮಾಡಿರುತ್ತದೆ. ಸದರಿ ಸಭೆಯು, ಅಂತಹ ಪ್ರಕಾಶಕರೊಂದಿಗೆ ಮಾತುಕತೆ ನಡೆಸಿ, ಗರಿಷ್ಠ ರಿಯಾಯಿತಿಯನ್ನು ಪಡೆದು ಏಕ ಪ್ರಕಾಶನದ ಪುಸ್ತಕಗಳನ್ನು ಒಂದೇ ದರಪಟ್ಟಿಯ ಮೂಲಕ ಖರೀದಿಸಲು ಸರ್ಕಾರದ ಅನುಮೋದನೆಯನ್ನು ಪಡೆದು ಕ್ರಮ ವಹಿಸಲು ಸಭೆಯು ಅನುಮೋದಿಸಿತು. |
| **ವಿಷಯ 02** | **2022-23 ಮತ್ತು 2023-24ನೇ ಶೈಕ್ಷಣಿಕ ಸಾಲಿನ 13 ಮತ್ತು 14ನೇ ಸ್ನಾತಕ ಪೂರ್ವ ದೀಕ್ಷಾಂತ ಕಾರ್ಯಕ್ರಮವನ್ನು ನಡೆಸಲು ಅನುಮತಿ ಮತ್ತು ತಗಲುವ ಅಂದಾಜು ಖರ್ಚು ರೂ.9,00,000.00 (ಒಂಬತ್ತು ಲಕ್ಷ ರೂಗಳು ಮಾತ್ರ)ಗಳಿಗೆ 72ನೇ ಪ್ರಶಾಸನ ಸಮಿತಿ ಸಭೆಯಲ್ಲಿ ಅನುಮೋದನೆಯನ್ನು ಪಡೆಯುವ ಬಗ್ಗೆ.** |
| **ಟಿಪ್ಪಣಿ** | ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ಈ ಹಿಂದಿನಿಂದಲೂ ಸ್ನಾತಕ ಪೂರ್ವ ದೀಕ್ಷಾಂತ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದ್ದು, ಅದರಂತೆ 2022-23 ಮತ್ತು 2023-24ನೇ ಎರಡು ಶೈಕ್ಷಣಿಕ ವರ್ಷಗಳ 13 & 14ನೇ ಸ್ನಾತಕ ಪೂರ್ವ ದೀಕ್ಷಾಂತ ಕಾರ್ಯಕ್ರಮವನ್ನು 2024ನೇ ವರ್ಷದಲ್ಲಿ ನಡೆಸಲು ಉದ್ದೇಶಿಸಿದ್ದು, ಸದರಿ ಕಾರ್ಯಕ್ರಮಕ್ಕೆ ಅಂದಾಜು ರೂ.9,00,000.00 (ಒಂಬತ್ತು ಲಕ್ಷ ರೂಗಳು ಮಾತ್ರ) ಖರ್ಚಾಗಲಿದ್ದು, ಈ ವಿಷಯವನ್ನು ಪ್ರಶಾಸನ ಸಮಿತಿಯ ಅನುಮತಿಗಾಗಿ ಮಂಡಿಸಿದೆ. |
| ನಿರ್ಣಯ | **ನಿರ್ದೇಶನಾಲಯಕ್ಕೆ ಒದಗಿಸಿರುವ ವಾರ್ಷಿಕ ಆಯ-ವ್ಯಯದಲ್ಲಿ ಈ ಬಗ್ಗೆ ಅನುದಾನವನ್ನು ಮೀಸಲಿರಿಸಿದಲ್ಲಿ 2022-23 ಮತ್ತು 2023-24ನೇ ಶೈಕ್ಷಣಿಕ ಸಾಲಿನ 13 ಮತ್ತು 14ನೇ ಸ್ನಾತಕ ಪೂರ್ವ ದೀಕ್ಷಾಂತ ಕಾರ್ಯಕ್ರಮವನ್ನು ಆಯೋಜಿಸಬಹುದೆಂದು ಸಭೆಯು ಸೂಚಿಸಿತು.** |
| **ವಿಷಯ 03** | **IKS ಯೋಜನೆಗೆ ICICI ಬ್ಯಾಂಕ್‌ನಲ್ಲಿ Account ಮಾಡಿಸುವ ಬಗ್ಗೆ.** |
| **ಟಿಪ್ಪಣಿ** | IKS (Indian Knowledge System) ನಿಂದ ವ್ಯಾಕರಣ ವಿಭಾಗಕ್ಕೆ ಶಾಸ್ತ್ರಕೋಶ ಯೋಜನೆಗಾಗಿ ರೂ 7.50ಲಕ್ಷ ಮಂಜೂರಾಗಿದ್ದು, ಬಿಡುಗಡೆಗಾಗಿ ICICI ಬ್ಯಾಂಕ್‌ನಲ್ಲಿ ZBSA (Zero Balance Savings Account) ತೆರೆಯಲು |

| | |
|---|---|
| | IKS ಮಾರ್ಗಸೂಚಿಯಲ್ಲಿ ತಿಳಿಸಿರುವುದರಿಂದ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ IKS ವಿಭಾಗದಿಂದ ವಿಶ್ವವಿದ್ಯಾಲಯದ ವ್ಯಾಕರಣ ವಿಭಾಗಕ್ಕೆ ಮಂಜೂರಾದ ಯೋಜನೆಯಾಗಿದ್ದು, ಮಾರ್ಗಸೂಚಿಯಲ್ಲಿ ICICI ಬ್ಯಾಂಕ್‌ನಲ್ಲಿ ZBSA (Zero Balance Savings Account) ಖಾತೆಯನ್ನು ತೆರೆಯಲು ನಿರ್ದಿಷ್ಟವಾಗಿ ತಿಳಿಸಲಾಗಿದೆ. ಈ ಬಗ್ಗೆ ಈಗಾಗಲೇ ಸರ್ಕಾರಕ್ಕೆ ಮಾಹಿತಿ ನೀಡಿ ಪತ್ರಿಸಲಾಗಿದೆ ಎಂದು ಕುಲಸಚಿವರು ಸಭೆಗೆ ತಿಳಿಸಿದರು. ಶಿಕ್ಷಾ ಮಂತ್ರಾಲಯವು ನಿರ್ದಿಷ್ಟವಾಗಿ ತಿಳಿಸಿರುವುದರಿಂದ ICICI ಬ್ಯಾಂಕ್‌ನಲ್ಲಿ ZBSA (Zero Balance Savings Account) ಖಾತೆಯನ್ನು ತೆರೆಯಲು ಸಭೆಯು ಅನುಮೋದಿಸಿತು ಹಾಗೂ ಯೋಜನೆಯು ಮುಗಿದ ನಂತರ ಖಾತೆಯನ್ನು ಮುಕ್ತಾಯಗೊಳಿಸಲು ಸೂಚಿಸಿತು.** |
| **ವಿಷಯ 04** | **CSR Fund ನೋಂದಣಿ ಮಾಡಿಸುವ ಬಗ್ಗೆ 12A/80G Registration Final ನೋಂದಣಿಗಾಗಿ ಸಲ್ಲಿಸಲು ಅನುಮೋದನೆ ಪಡೆಯಲು.** |
| ಟಿಪ್ಪಣಿ | CSR (Corporate Social Responsibility) Fund ಪಡೆಯಲು ನೋಂದಣಿ ಮಾಡಿಸುವ ಬಗ್ಗೆ ಮತ್ತು 12A/80G Registration Provisional ನೋಂದಣಿ ಆಗಿದ್ದು Final ನೋಂದಣಿಗಾಗಿ ಸಲ್ಲಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **CSR Fund ನೋಂದಣಿ ಮಾಡಿಸುವ ಬಗ್ಗೆ 12A/80G Registration ನೋಂದಣಿಯನ್ನು ಮಾಡಿಸಲು ಸಭೆಯು ಅನುಮೋದಿಸಿತು.** |
| **ವಿಷಯ 05** | **ಪ್ರೊ. ವೀರನಾರಾಯಣ ಎನ್ ಕೆ ಪಾಂಡುರಂಗಿ, ಡೀನ್, ವೇದಾಂತ ನಿಕಾಯ, ಕಸಂವಿ ಇವರು –ಪೂರ್ಣಪ್ರಜ್ಞಾ ಸಂಶೋಧನಾ ಮಂದಿರಂ, ಬೆಂಗಳೂರು– ಇಲ್ಲಿಗೆ ನಿರ್ದೇಶಕ ಹುದ್ದೆಗೆ ಅರ್ಜಿಯನ್ನು ರವಾನಿಸುವ ಸಂಬಂಧ/ನಿರಾಕ್ಷೇಪಣೆ ನೀಡುವ ಬಗ್ಗೆ ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ.** |
| ಟಿಪ್ಪಣಿ | ಪ್ರೊ. ವೀರನಾರಾಯಣ ಎನ್ ಕೆ ಪಾಂಡುರಂಗಿ, ಡೀನ್, ವೇದಾಂತ ನಿಕಾಯ, ಕಸಂವಿ ಇವರು ಮನವಿ ಸಲ್ಲಿಸಿ ಪೂರ್ಣಪ್ರಜ್ಞಾ ಸಂಶೋಧನಾ ಮಂದಿರಂ, ಬೆಂಗಳೂರು – ಇಲ್ಲಿಗೆ ನಿರ್ದೇಶಕರ ಹುದ್ದೆಗೆ ಐದು ವರ್ಷಗಳ ಅವಧಿಗೆ ನಿಯೋಜನೆ ಮೇಲೆ ನೇಮಕಾತಿ ಹೊಂದಲು ಅರ್ಜಿಯನ್ನು ರವಾನಿಸಬೇಕೆಂದು/ನಿರಾಕ್ಷೇಪಣೆಯನ್ನು ನೀಡಬೇಕೆಂದು ಕೋರಿರುತ್ತಾರೆ. ಸದರಿ ಸಂಸ್ಥೆಯು National Sanskrit University ಯ ಅನುದಾನಿತ/ಮಾನಿತ ಸಂಶೋಧನಾ ಕೇಂದ್ರವಾಗಿದೆ. ಈ ಸಂಸ್ಥೆಯ ನಿರ್ದೇಶಕರ ಹುದ್ದೆಯು UGC ನಿಯಮಾವಳಿಯಂತೆ Professor ವೃಂದದ ಹುದ್ದೆಯಾಗಿದೆ. ಸದರಿ ನೌಕರರು ಈ ಸಂಸ್ಥೆಯ ನಿರ್ದೇಶಕ ಹುದ್ದೆಗೆ ಅರ್ಜಿಯನ್ನು ರವಾನಿಸುವ/ನಿರಾಕ್ಷೇಪಣೆ ನೀಡುವ ಸಂಬಂಧ ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | ಸದರಿ ವಿಷಯವನ್ನು ಕೂಲಂಕುಷವಾಗಿ ಸಭೆಯು ಚರ್ಚಿಸಿತು.<br>ಸರ್ಕಾರಿ ನೌಕರರನ್ನು ಖಾಸಗಿ ಅನುದಾನಿತ ಸಂಸ್ಥೆಗೆ ನಿಯೋಜನೆಯ ಮೇರೆಗೆ ಕಳುಹಿಸಲು ನಾಗರಿಕ ಸೇವಾ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಅಲ್ಲದೇ ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ 04 ಪ್ರಾಧ್ಯಾಪಕರು ಮಾತ್ರ ಇರುವುದರಿಂದ ಸದರಿಯವರನ್ನೂ ಹೊರಗೆ ಕಳುಹಿಸಿದಲ್ಲಿ ಶೈಕ್ಷಣಿಕ ಚಟುವಟಿಕೆಗೆ ಅನಾನುಕೂಲವಾಗುತ್ತದೆ ಎಂದು ಈಗಾಗಲೇ ಕಡತದಲ್ಲಿ ಮಂಡಿಸಲಾಗಿದೆ ಎಂದು ಕುಲಸಚಿವರು ಸಭೆಯ ಗಮನಕ್ಕೆ ತಂದರು.<br>ಮಾನ್ಯ ಸದಸ್ಯರಾದ ಪ್ರೊ.ಡಿ ಶಿವಲಿಂಗಯ್ಯನವರು ಮಾತನಾಡಿ ಸದರಿ ಪ್ರಸ್ತಾವನೆಯು ಸಂಸ್ಕೃತ ಸಂಶೋಧನೆ ವಿಷಯಕ್ಕೆ ಸಂಬಂಧಿಸಿದ್ದು, ಪೂರ್ಣಪ್ರಜ್ಞಾಸಂಶೋಧನಾ ಮಂದಿರಂ, ಬೆಂಗಳೂರು ಎಂಬ ವಿದ್ಯಾಸಂಸ್ಥೆಯು ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾನಿಲಯ, ದೆಹಲಿ ಇವರಿಂದ ಮಾನ್ಯತೆ ಪಡೆದ ಸಂಸ್ಥೆಯಾಗಿರುತ್ತದೆ. ಅಲ್ಲದೇ ಸದರಿ ನಿರ್ದೇಶಕ ಹುದ್ದೆಯು "Adarsh Shodh Sansthan under "The scheme for Financial assistance to |

institutions recognized as Adarsh Sanskrit Mahavidyalayas/Adarsh Sanskrit Shodh Sansthas"ದಿಂದ ಸೃಜನೆಯಾಗಿರುದರಿಂದ ಸದರಿಯವರ ವೇತನ, ರಜಾ ಮತ್ತು ಪಿಂಚಣಿ ಸೌಲಭ್ಯವನ್ನು ಪೂರ್ಣಪ್ರಜ್ಞಾ ಸಂಶೋಧನಾ ಮಂದಿರಂ, ಬೆಂಗಳೂರು ಇವರೇ ಭರಿಸುವ ಷರತ್ತಿಗೊಳಪಟ್ಟು ಯು.ಜಿ.ಸಿ ನಿಯಮದಂತೆ ಮೂರು ವರ್ಷದ ಅವಧಿಗೆ ಲೀನ್ ಕೊಡಬಹುದೆಂದು ಅಭಿಪ್ರಾಯಪಟ್ಟರು. ಅಲ್ಲದೇ ಖಾಸಗಿ ಸಂಸ್ಥೆಗಳಿಗೆ ಈಗಾಗಲೇ ಕೆಲವು ವಿಶ್ವವಿದ್ಯಾಲಯಗಳು ಲೀನ್ ಆಧಾರದ ಮೇಲೆ ಕಳುಹಿಸಿರುವ ಬಗ್ಗೆ ನಿದರ್ಶಗಳನ್ನು ಸಹ ಕೊಟ್ಟರು.

ಮತ್ತೋರ್ವ ಮಾನ್ಯ ಸದಸ್ಯರಾದ ಡಾ.ಮುನೀರ್ ಅಹಮ್ಮದ್ ರವರು ಮಾತನಾಡಿ ರಾಜೀವ್ ಗಾಂಧಿ ವಿವಿಯಲ್ಲಿಯೂ ಸಹ ಖಾಸಗಿ ಸಂಸ್ಥೆಗೆ ನಿಯೋಜನೆಯಾಗಿರುವ ಪ್ರಸಂಗಳನ್ನು ಪ್ರಸ್ತಾಪಿಸಿದರು.

ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಪರವಾಗಿ ಸಭೆಯಲ್ಲಿ ಭಾಗವಹಿಸಿದ್ದ ಶ್ರೀ ಏಕೇಶ್ ಬಾಬು, ಸರ್ಕಾರದ ಉಪ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರು ವಿಶ್ವವಿದ್ಯಾಲಯದಿಂದ ವಿಶ್ವವಿದ್ಯಾಲಯಕ್ಕೆ ನಿಯೋಜನೆ ಮೇರೆಗೆ ತೆರಳಿರುವುದನ್ನು ಉಲ್ಲೇಖಿಸಿ, ಸದರಿ ಸಂಸ್ಥೆಯು ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಹೊಂದಿರುವುದರಿಂದ ಸದರಿ ನಿಯೋಜನೆಯಿಂದ ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆಯಿಲ್ಲದಿದ್ದಲ್ಲಿ ಮೂರು ವರ್ಷದ ಅವಧಿಯ ನಿಯೋಜನೆಗೆ ಅನುಮತಿ ನೀಡಬಹುದೆಂದು ಅಭಿಪ್ರಾಯಿಸಿ ಸದಸ್ಯರ ಕೋರಿಕೆಯಂತೆ ಮತ್ತೊಮ್ಮೆ ತಮ್ಮ ಅಭಿಪ್ರಾಯವನ್ನು ಖಚಿತಪಡಿಸಿದರು.

ಈ ಪ್ರಸ್ತಾವನೆಯು ಶೈಕ್ಷಣಿಕ ಉದ್ದೇಶವಾಗಿರುವುದರಿಂದ ಸದರಿ ನಿಯೋಜನೆಗೆ ಅನುಮತಿಸಬಹುದು ಎಂದು ಮಾನ್ಯ ಸದಸ್ಯರಾದ ಶ್ರೀ ಬಸಪ್ಪ ಡೊಂಕಬಳ್ಳಿ, ಶ್ರೀ ನಾರಾಯಣ ಯಾಜಿ ಇವರು ಅಭಿಪ್ರಾಯಿಸಿದರು.

ಸುದೀರ್ಘವಾಗಿ ಚರ್ಚಿಸಿ ಬಹುಮತದ ಆಧಾರದಲ್ಲಿ ಸಭೆಯು ಈ ಕೆಳಗಿನಂತೆ ತೀರ್ಮಾನಿಸಿತು.

"ಪ್ರೊ. ವೀರನಾರಾಯಣ ಎನ್.ಕೆ ಪಾಂಡುರಂಗಿ, ಡೀನ್, ವೇದಾಂತ ನಿಕಾಯ, ಕಸಂವಿ ಇವರು –ಪೂರ್ಣಪ್ರಜ್ಞಾ ಸಂಶೋಧನಾ ಮಂದಿರಂ, ಬೆಂಗಳೂರು – ಇಲ್ಲಿಗೆ ನಿರ್ದೇಶಕ ಹುದ್ದೆಗೆ ನಿಯೋಜನೆಯ(ಲೀನ್) ಮೇಲೆ ತೆರಳಲು ಈ ಕೆಳಗಿನ ಷರತ್ತಿಗೊಳಪಟ್ಟು ನಿರಾಕ್ಷೇಪಣಾ ಪತ್ರ ನೀಡಬಹುದೆಂದು ಸಭೆಯು ತೀರ್ಮಾನಿಸಿತು.

1. ಸದರಿಯವರ ನಿಯೋಜನೆಯನ್ನು ಕೇವಲ 03 ವರ್ಷಗಳಿಗೆ ಮಾತ್ರ ಸೀಮಿತಗೊಳಿಸಿದೆ.
2. ನಿಯೋಜನೆಯ ಅವಧಿಯಲ್ಲಿ ಸದರಿಯವರ ವೇತನ, ಭತ್ಯೆಗಳನ್ನು ಪೂರ್ಣಪ್ರಜ್ಞಾಸಂಶೋಧನಾ ಮಂದಿರಂ, ಬೆಂಗಳೂರು ಇವರೇ ಭರಿಸಬೇಕು.
3. ಸದರಿಯವರ ರಜಾ ಮತ್ತು ಪಿಂಚಣಿ ಸೌಲಭ್ಯವನ್ನು ಪೂರ್ಣಪ್ರಜ್ಞಾ ಸಂಶೋಧನಾ ಮಂದಿರಂ, ಬೆಂಗಳೂರು ಇವರೇ ಭರಿಸಬೇಕು. ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆಯಿರಬಾರದು.
4. ನಿಯೋಜನೆಯು ಯಾವುದೇ ಕಾರಣಕ್ಕೂ ಮೂರು ವರ್ಷದ ನಂತರ ಪುನಃ ಮುಂದುವರಿಸಲು ಮನವಿ ಸಲ್ಲಿಸುವಂತಿಲ್ಲ.
5. ಸದರಿಯವರ ಸಂಶೋಧನಾ ಪ್ರಕಟಣೆ, ಕಾರ್ಯಗಾರ, ವಿಚಾರ ಸಂಕಿರಣ ಮತ್ತು ಇನ್ನಿತರ ಶೈಕ್ಷಣಿಕ ಚಟುವಟಿಕೆಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಕೈಗೊಳ್ಳತಕ್ಕದ್ದು.

ಸದರಿಯವರ ಕಾರ್ಯಭಾರಕ್ಕೆ ಅನುಗುಣವಾಗಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಸಭೆಯು ಅನುಮೋದಿಸಿತು.

ಆದರೆ ಸದಸ್ಯ ಕಾರ್ಯದರ್ಶಿಗಳಾದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರು ಈ ನಿರ್ಣಯಕ್ಕೆ ತಮ್ಮ ಅಸಮ್ಮತಿಯನ್ನು ಸೂಚಿಸಿದರು. ಆದಾಗ್ಯೂ, ಇನ್ನುಳಿದ ಸದಸ್ಯರು ಶೈಕ್ಷಣಿಕ ಹಾಗೂ ಸಂಶೋಧನಾತ್ಮಕ ಚಟುವಟಿಕೆ ಆಗಿರುವುದರಿಂದ ಹಾಗೂ 03 ವರ್ಷಗಳಿಗೆ ಸೀಮಿತವಾದ್ದರಿಂದ ಇದನ್ನು ಒಪ್ಪಬಹುದಾಗಿದೆ ಎಂದು ನಿರ್ಣಯಿಸಿದರು.

| | |
|---|---|
| ವಿಷಯ 06 | **ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾರ್ಪಾಡು ಮಾಡಿಕೊಳ್ಳಲು ಮತ್ತು ಶ್ರೀ ಬಿ ವಿ ಶ್ರೀನಿವಾಸಯ್ಯ, ನಿವೃತ್ತ ಉಪಕಾರ್ಯದರ್ಶಿ, ಕರ್ನಾಟಕ ಸರ್ಕಾರಿ ಸಚಿವಾಲಯ, ಇವರನ್ನು ಸಮಾಲೋಚಕರನ್ನಾಗಿ ನೇಮಕ ಮಾಡಿಕೊಳ್ಳಲು ಪ್ರಶಾಸನ ಸಮಿತಿಯ ಒಪ್ಪಿಗೆ ಪಡೆಯುವ ಕುರಿತು.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ 2011 ರಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ 91 ಯು ಆರ್ ಸಿ 2010, ದಿನಾಂಕ: 25.01.2011 ರಂತೆ 133 ಹುದ್ದೆಗಳು ಮಂಜೂರಾಗಿದ್ದು, 2012 ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳು ಅನುಮೋದನೆಗೊಂಡಿರುತ್ತದೆ. ಈ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಯುಜಿಸಿ ವೇತನ ಶ್ರೇಣಿಯ ಹುದ್ದೆಗಳು ಮತ್ತು ರಾಜ್ಯವೇತನ ಶ್ರೇಣಿಯ ಹುದ್ದೆಗಳು ಸೇರಿ ಒಂದೇ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿಕೊಳ್ಳಲಾಗಿದ್ದಿತು. ಆದರೆ, ಯುಜಿಸಿ ವೇತನ ಶ್ರೇಣಿಯ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಯುಜಿಸಿ ನಿಯಮಾವಳಿಗಳನ್ವಯ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರಿನಿಯಮವು ಸರ್ಕಾರದಿಂದ ಅನುಮೋದನೆಗೊಂಡಿರುತ್ತದೆ.<br>ಪ್ರಸ್ತುತ, ರಾಜ್ಯವೇತನ ಶ್ರೇಣಿಯ ನೇಮಕಾತಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚನೆ/ಮಾರ್ಪಾಡು ಮಾಡಿಕೊಳ್ಳಬೇಕಾಗಿದೆ. ಸರ್ಕಾರಿ ನಿಯಮಗಳಂತೆ ಪ್ರತಿ ಮೂರು ವರ್ಷಗಳಿಗೆ ಸರ್ಕಾರಿ ನಿಯಮಗಳು/ಆದೇಶ/ಅಧಿಸೂಚನೆಗಳನ್ವಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾರ್ಪಾಡು ಮಾಡಿಕೊಳ್ಳಬೇಕಾಗಿದ್ದು, ಪ್ರಸ್ತುತ ಇರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾರ್ಪಾಡು ಮಾಡಿಕೊಳ್ಳಲು ಮತ್ತು ಶ್ರೀ ಬಿ ವಿ ಶ್ರೀನಿವಾಸಯ್ಯ, ನಿವೃತ್ತ ಉಪಕಾರ್ಯದರ್ಶಿ, ಕರ್ನಾಟಕ ಸರ್ಕಾರಿ ಸಚಿವಾಲಯ, ಇವರನ್ನು ಸಮಾಲೋಚಕರನ್ನಾಗಿ ನೇಮಕ ಮಾಡಕೊಳ್ಳಲು ವಿಷಯವನ್ನು ಪ್ರಶಾಸನ ಸಮಿತಿಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾರ್ಪಾಡು/ತಿದ್ದುಪಡಿ ಮಾಡಿಕೊಳ್ಳಲು ಮತ್ತು ಶ್ರೀ ಬಿ ವಿ ಶ್ರೀನಿವಾಸಯ್ಯ, ನಿವೃತ್ತ ಉಪಕಾರ್ಯದರ್ಶಿ, ಕರ್ನಾಟಕ ಸರ್ಕಾರಿ ಸಚಿವಾಲಯ ಇವರನ್ನು ಸಮಾಲೋಚಕರನ್ನಾಗಿ ನೇಮಕ ಮಾಡಕೊಳ್ಳಲು ಸಭೆಯು ಅನುಮೋದಿಸಿತು. ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗೆ ಮೂರು ತಿಂಗಳ ಕಾಲಾವಕಾಶವನ್ನು ನಿಗದಿಪಡಿಸಿ, ಸದರಿಯವರು ಮೂರು ತಿಂಗಳ ಒಳಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಿ ಕರಡನ್ನು ಸಲ್ಲಿಸಬೇಕು. ಶ್ರೀ ಬಿ ವಿ ಶ್ರೀನಿವಾಸಯ್ಯ, ನಿವೃತ್ತ ಉಪಕಾರ್ಯದರ್ಶಿ ಇವರಿಗೆ ಮಾಸಿಕ 38000/- ರೂ ಭತ್ಯೆಯನ್ನು ಮೂರು ತಿಂಗಳ ಅವಧಿಗೆ ಪಾವತಿಸಲು ಸಭೆಯು ತೀರ್ಮಾನಿಸಿತು. ಮಾನ್ಯ ಸದಸ್ಯರಾದ ಡಾ. ಶಿವಲಿಂಗಯ್ಯ ಮತ್ತು ಶ್ರೀ ನಾರಾಯಣ ಯಾಜಿ ಇವರು ವೃಂದ ಮತ್ತು ನೇಮಕಾತಿ ನಿಯಮದ ಕರಡು ಪರಿಷ್ಕರಣೆಗೆ ಸಹಕರಿಸುವುದಾಗಿ ಸ್ವಯಂ ಪ್ರೇರಣೆಯಿಂದ ಹೇಳಿದ್ದನ್ನು ಸಭೆಯು ಶ್ಲಾಘಿಸಿತು.** |
| ವಿಷಯ 07 | **ವಿವೇಕಧಾರಾ ಪುಸ್ತಕವನ್ನು ಸಂಸ್ಕೃತಕ್ಕೆ ಅನುವಾದ ಮಾಡಿ, ಮುದ್ರಣಕ್ಕೆ ಅವಕಾಶ ಮಾಡಿಕೊಡುವ ಬಗ್ಗೆ.** |
| ಟಿಪ್ಪಣಿ | ತುಮಕೂರಿನ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಪೂಜ್ಯ ಶ್ರೀ ಶ್ರೀ ಡಾ. ವೀರೇಶಾನಂದ ಸರಸ್ವತಿ ಸ್ವಾಮೀಜಿಯವರು ಬರೆದಿರುವ **'ವಿವೇಕಧಾರಾ'** ಪುಸ್ತಕವನ್ನು ಶ್ರೀಮತಿ ಪ್ರೇಮಾ ಹೆಗಡೆ ರವರಿಂದ ಸಂಸ್ಕೃತಕ್ಕೆ ಅನುವಾದ ಮಾಡಿಸಿ, ಮುದ್ರಿಸಿ ನಿಗದಿತ ಹಣಕಾಸು ವೆಚ್ಚವನ್ನು ಭರಿಸಲು ಪ್ರಶಾಸನ ಸಮಿತಿಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ನಿಯಮಾನುಸಾರ ವಿವೇಕಧಾರಾ ಪುಸ್ತಕವನ್ನು ಸಂಸ್ಕೃತಕ್ಕೆ ಅನುವಾದ ಮಾಡಿ ಪ್ರಸಾರಾಂಗದಿಂದ ಮುದ್ರಿಸಲು ಸಭೆಯು ಅನುಮೋದಿಸಿತು.** |

| ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರೆ ವಿಷಯಗಳು | |
|---|---|
| ವಿಷಯ 01 | ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಕಾನೂನು ಸಲಹೆಗಾರರಾದ ಶ್ರೀ ವೆಂಕಟೇಶ್, ವಕೀಲರು –ಇವರ ಮಾಸಿಕ ಕಾನೂನು ಶುಲ್ಕವನ್ನು ಪಾವತಿಸುವ ಬಗ್ಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯಕ್ಕೆ ಸಂಬಂಧಿಸಿದ ನ್ಯಾಯಾಲಯ ಪ್ರಕರಣಗಳಿಗೆ ಕಾನೂನು ಸಲಹೆಗಾರರಾಗಿ ನೇಮಕಗೊಂಡು ಕೆಲಸ ನಿರ್ವಹಿಸುತ್ತಿರುವ ವಕೀಲರಾದ ಶ್ರೀ ವೆಂಕಟೇಶ್‌ರವರಿಗೆ ಮಾಸಿಕ ರೂ. 15000/– ರಂತೆ ಸಂಭಾವನೆಯನ್ನು ನಿಗಧಿಪಡಿಸಲಾಗಿತ್ತು. ದಿನಾಂಕ:16.08.2022 ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿ ವಿಷಯ ಸಂಖ್ಯೆ–08 ರಂತೆ ಮತ್ತು ದಿನಾಂಕ:18.02.2022 ರಂದು ನಡೆದ 61ನೇ ಪ್ರಶಾಸನ ಸಮಿತಿ ಸಭೆಯ ನಡಾವಳಿ ವಿಷಯ ಸಂಖ್ಯೆ–14 ರಂತೆ ಪ್ರಕರಣವಾರು ಶುಲ್ಕ ಪಾವತಿಸಲು ಸೂಚಿಸಿ ಸಂಭಾವನೆಯನ್ನು ಪಾವತಿಸಲು ಅನುಮೋದನೆ ನೀಡಲಾಗಿದೆ. ಆದರೆ ಶ್ರೀ ವೆಂಕಟೇಶ್, ವಕೀಲರು ಇವರು ಈ ಹಿಂದಿನಂತೆ ಮಾಸಿಕ 15,000/– ರೂ. ಸಂಭಾವನೆ ನೀಡುವಂತೆ ಕೋರಿರುತ್ತಾರೆ. ವಿಶ್ವವಿದ್ಯಾಲಯದ ನಿರ್ದೇಶನಾಲಯ ವಿಭಾಗಕ್ಕೆ ಸೂಕ್ತ ರೀತಿಯಲ್ಲಿ ಕಾನೂನು ಸೇವೆಯನ್ನು ನೀಡುತ್ತಿರುವುದರಿಂದ ಪ್ರಕರಣವಾರು ಶುಲ್ಕ ಪಾವತಿಸುವುದಕ್ಕಿಂತ, ಬಾಕಿ ಇರುವ ಮೊತ್ತವನ್ನು ಮಾಸಿಕವಾರು ಗೌರವ ಸಂಭಾವನೆಯನ್ನು ಪಾವತಿಸುವುದು ಸೂಕ್ತವಾದುದು. ಆದ್ದರಿಂದ ಇವರಿಗೆ ಮಾಸಿಕವಾರು ಸಂಭಾವನೆ ಪಾವತಿಸಿ, ಇವರ ಇಳಿ ವಯಸ್ಸಿನ ಹಿನ್ನೆಲೆಯಲ್ಲಿ ಇವರ ಸೇವೆಯನ್ನು ಮೊಟಕುಗೊಳಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಕಾನೂನು ಸಲಹೆಗಾರರಾದ ಶ್ರೀ ವೆಂಕಟೇಶ್, ವಕೀಲರು –ಇವರಿಗೆ ಬಾಕಿಯಿರುವ ಶುಲ್ಕವನ್ನು ಮಾಸಿಕ 15,000/– ರೂ ನಂತೆ ಪಾವತಿಸಲು ಸಭೆಯು ಅನುಮೋದಿಸಿತು.** |
| ವಿಷಯ 02 | ವಿಶ್ವವಿದ್ಯಾಲಯಕ್ಕೆ ಹೊಸದಾಗಿ ಕಾನೂನು ಸಲಹೆಗಾರರನ್ನು ನೇಮಿಸಿಕೊಳ್ಳುವ ಬಗ್ಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯದ ಅಧೀನವಾದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ಸಂಸ್ಕೃತ ಪಾಠಶಾಲೆಗಳ ಕಾನೂನಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಕಾನೂನು ಸಲಹೆಯನ್ನು ಪಡೆಯಲು ಶ್ರೀ ಸಿದ್ರಾಮಪ್ಪ ವೈ. ರೋಡಗಿ, ಬಿ.ಕಾಂ., ಎಲ್.ಎಲ್.ಬಿ., ಗಾಂಧಿ ನಗರ ಬೆಂಗಳೂರು –ಇವರನ್ನು ನೇಮಿಸಿಕೊಂಡು ಮಾಸಿಕವಾರು ರೂ 15000/–ಗಳ (ಹದಿನೈದು ಸಾವಿರ ರೂಪಾಯಿಗಲು ಮಾತ್ರ.) ಗೌರವ ಸಂಭಾವನೆ ಪಾವತಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯಕ್ಕೆ ಶ್ರೀ ಸಿದ್ರಾಮಪ್ಪ ವೈ. ರೋಡಗಿ, ಬಿ.ಕಾಂ., ಎಲ್.ಎಲ್.ಬಿ., ಗಾಂಧಿ ನಗರ ಬೆಂಗಳೂರು –ಇವರನ್ನು ಕಾನೂನು ಸಲಹೆಗಾರರನ್ನಾಗಿ ನೇಮಿಸಿಕೊಂಡು ಮಾಸಿಕ ರೂ 15000/– ರೂ. (ಹದಿನೈದು ಸಾವಿರ ರೂಪಾಯಿಗಳು ಮಾತ್ರ) ಗೌರವ ಸಂಭಾವನೆ ಪಾವತಿಸಲು ಸಭೆಯು ಅನುಮೋದಿಸಿತು.** |
| ವಿಷಯ 03 | ದಿನಾಂಕ: 03.01.2024ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 37ನೇ ಸಭೆಯಲ್ಲಿ Ayurveda and Folk Medicine ವಿಭಾಗದ ಕೋರ್ಸಗಳನ್ನು ಡಿಪ್ಲೋಮಾ ಕೋರ್ಸಗಳ ಅಡಿಯಲ್ಲಿ ಸೇರಿಸಲಾಗಿದ್ದು, ಅವುಗಳನ್ನು ಸರ್ಟಿಫಿಕೇಟ್ ಕೋರ್ಸಗಳಾಗಿ ತಿದ್ದುಪಡಿಮಾಡುವ ಬಗೆಗೆ. |
| ಟಿಪ್ಪಣಿ | ವಿಶ್ವವಿದ್ಯಾಲಯದಲ್ಲಿ ಹಾಗೂ ಅಧೀನ ಸಂಸ್ಥೆಗಳಲ್ಲಿ ಈಗಾಗಲೇ ಹಲವು ವಿಭಾಗಗಳಡಿಯಲ್ಲಿ ವಿವಿಧ ಸರ್ಟಿಫಿಕೇಟ್/ಡಿಪ್ಲೋಮಾ ಕೋರ್ಸಗಳನ್ನು ನಡೆಸಲಾಗುತ್ತಿದೆ. ಸರ್ಟಿಫಿಕೇಟ್ ಕೋರ್ಸಗಳ ಪಟ್ಟಿ ಈ ಕೆಳಗಿನಂತಿದೆ. |

## List of Certificate Courses

| S.N | Department | | Name of the Course |
|---|---|---|---|
| 1 | Ayurveda and Folk Medicine | 1 | Basics of Vedic Astrology for Beginners – 'Ayurjyotisha' |
| | | 2 | Vedic Dinacharya for present day healthy living |
| | | 3 | Ayurvedic Manuscriptology |
| | | 4 | Yoga and Psychotherapy |
| | | 5 | Introduction to AyurYoga |
| | | 6 | Ayurvediya PaakaShastra |
| | | 7 | Introduction to GarbhaSamskara |

ದಿನಾಂಕ: 03.01.2024ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 37ನೇ ಸಭೆಯಲ್ಲಿ **Ayurveda and Folk Medicine** ವಿಭಾಗದ ಕೋರ್ಸಗಳನ್ನು ಡಿಪ್ಲೋಮಾ ಕೋರ್ಸ ಗಳ ಅಡಿಯಲ್ಲಿ ಸೇರಿಸಲಾಗಿದ್ದು, ಸದರಿ ಕೋರ್ಸ್‌ಗಳನ್ನು ಸರ್ಟಿಫಿಕೇಟ್ ಕೋರ್ಸ್‌ಗಳಾಗಿ ಮಾರ್ಪಾಡು/ತಿದ್ದುಪಡಿ ಮಾಡಿ ಅನುಮೋದಿಸಲು ಕೋರಿದೆ.

| | |
|---|---|
| ನಿರ್ಣಯ | **ದಿನಾಂಕ: 03.01.2024ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 37ನೇ ಸಭೆಯಲ್ಲಿ** Ayurveda and Folk Medicine **ವಿಭಾಗದ ಕೋರ್ಸಗಳನ್ನು ಡಿಪ್ಲೋಮಾ ಕೋರ್ಸಗಳ ಅಡಿಯಲ್ಲಿ ಸೇರಿಸಲಾಗಿದ್ದು, ಅವುಗಳನ್ನು ಸರ್ಟಿಫಿಕೇಟ್ ಕೋರ್ಸಗಳಾಗಿ ತಿದ್ದುಪಡಿಮಾಡಲು ಸಭೆಯು ಅನುಮೋದಿಸಿತು.** |
| **ವಿಷಯ: 04** | **ರಾಜ್ಯಸ್ತರೀಯ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರಯಾಣ ಭತ್ಯೆಯನ್ನು ಪಾವತಿಸುವ ಕುರಿತು.** |
| **ಟಿಪ್ಪಣಿ** | ಕರ್ನಾಟಕ ರಾಜ್ಯದ ಸಂಸ್ಕೃತ ಕಾಲೇಜುಗಳು/ಗುರುಕುಲಗಳು/ವಿದ್ಯಾಪೀಠಗಳಲ್ಲಿ ವಿವಿಧ ಶಾಸ್ತ್ರಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುವುದರಿಂದ, ಶಾಸ್ತ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ತಗಲುವ ಪ್ರಯಾಣಭತ್ಯೆಯನ್ನು ಮಂಜೂರು ಮಾಡಿದರೆ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗುತ್ತದೆ ಹಾಗೂ ಅವರಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದಂತಾಗುತ್ತದೆ. ಆದ್ದರಿಂದ, ಈ ಹಿಂದಿನ ವರ್ಷಗಳಲ್ಲಿ ನಡೆದ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಯಾಣಭತ್ಯೆಯನ್ನು ಪಾವತಿಸಲಾಗಿದ್ದು, ಈ ವಿಷಯಕ್ಕೆ ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಯನ್ನು ಕೋರಿದೆ. ಮುಂದಿನ ದಿನಗಳಲ್ಲಿ ನಡೆಯುವ ರಾಜ್ಯ/ರಾಷ್ಟ್ರಮಟ್ಟದ ಶಾಸ್ತ್ರೀಯ ಸ್ಪರ್ಧೆಗಳಲ್ಲಿ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುವಂತಹ ವಿದ್ಯಾರ್ಥಿಗಳಿಗೆ ಪ್ರಯಾಣಭತ್ಯೆಯನ್ನು ಪಾವತಿಸಲು ಸದರಿ ವಿಷಯವನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ರಾಜ್ಯಸ್ತರೀಯ ಶಾಸ್ತ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರಯಾಣ ಭತ್ಯೆಯನ್ನು ಪಾವತಿಸಲು ಹಾಗೂ ಈಗಾಗಲೇ ಪ್ರಯಾಣ ಭತ್ಯೆಯನ್ನು ಪಾವತಿಸಿರುವುದಕ್ಕೆ ಸಭೆಯು ಅನುಮೋದಿಸಿತು.** |
| **ವಿಷಯ: 05** | **ಮಾನ್ಯ ಕುಲಪತಿಗಳಿಗೆ ಹೊಸ ಕಾರನ್ನು ಖರೀದಿಸುವ ಬಗ್ಗೆ.** |
| **ಟಿಪ್ಪಣಿ** | ಮಾನ್ಯ ಕುಲಪತಿಗಳಿಗಾಗಿ 2015ರಲ್ಲಿ ಟೊಯೋಟಾ ಇನೋವಾ (VX2) (ಸಂಖ್ಯೆ: ಕೆಎ04 ಎಂಕ್ಯೂ 7762) ಕಾರನ್ನು ಖರೀದಿಸಲಾಗಿತ್ತು. ಈ ಕಾರು ಈಗಾಗಲೇ 2.70 ಲಕ್ಷ ಕಿ.ಮೀ.ಗಿಂತಲೂ ಅಧಿಕ ದೂರ ಕ್ರಮಿಸಿರುತ್ತದೆ. ಹೊಸ ಕಾರನ್ನು |

| | |
|---|---|
| | ಖರೀದಿಸಲು ಸರ್ಕಾರಿ ನಿಯಮಾನುಸಾರ ಕನಿಷ್ಠ 07 ವರ್ಷಗಳು ಅಥವಾ ಕನಿಷ್ಠ 2.00 ಲಕ್ಷ ಕಿ.ಮೀ. ದೂರವನ್ನು ಕ್ರಮಿಸುವುದು ಅಗತ್ಯವಾಗಿರುತ್ತದೆ. ಆದರೆ, ಈಗಿರುವ ಇನ್ನೋವಾ ಕಾರು ಈ ಎರಡೂ ನಿಯಮಗಳನ್ನು ಪೂರೈಸಿರುತ್ತದೆ. ಅಲ್ಲದೇ, ಈ ಕಾರಿನ ನಿರ್ವಹಣೆಗೆ ಹೆಚ್ಚಿನ ಮೊತ್ತದ ಖರ್ಚಾಗುತ್ತಿದೆ. ಆದುದರಿಂದ, ಮಾನ್ಯ ಕುಲಪತಿಗಳ ಬಳಕೆಗಾಗಿ ಸರ್ಕಾರದ ನಿಯಮಾನುಸಾರ ಹೊಸ ಕಾರನ್ನು ಖರೀದಿಸಲು ಪ್ರಶಾಸನ ಸಮಿತಿಯ ಅನುಮತಿಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಮಾನ್ಯ ಕುಲಪತಿಗಳಿಗೆ 30 ಲಕ್ಷ ರೂ. ಗಳ ಮಿತಿಯಲ್ಲಿ ಇನ್ನೋವಾ ಕ್ರಿಸ್ಟ 'ಜಿ' ಮಾದರಿಯ ಹೊಸ ಕಾರನ್ನು ಖರೀದಿಸಲು ಸಭೆಯು ಅನುಮೋದಿಸಿತು.** |
| **ವಿಷಯ: 06** | **ಡಾ. ಕೆ.ಇ. ಶ್ರೀವೆಂಕಟನಾಥನ್, ಸಹಾಯಕ ಪ್ರಾಧ್ಯಾಪಕರು, ನ್ಯಾಯ & ವೈಶೇಷಿಕ ವಿಭಾಗ, ಕ.ಸಂ.ವಿ. –ಇವರನ್ನು ಅಧ್ಯಯನಾಂಗದ ಪಿಎಚ್.ಡಿ. ವಿಭಾಗಕ್ಕೆ ಉಪನಿರ್ದೇಶಕರನ್ನಾಗಿ ತಾತ್ಕಾಲಿಕವಾಗಿ ನಿಯೋಜಿಸುವ ಬಗೆಗೆ.** |
| **ಟಿಪ್ಪಣಿ** | ಅಧ್ಯಯನಾಂಗದಲ್ಲಿ ಪಿಎಚ್.ಡಿ. ಅಧ್ಯಯನ ಮಾಡುವ ಸಂಶೋಧನಾರ್ಥಿಗಳ ಸಂಖ್ಯೆ ಅಧಿಕವಾಗುತ್ತಿದ್ದು, ಸಂಶೋಧನಾರ್ಥಿಗಳು ಮತ್ತು ಸಂಶೋಧನ ವಿಷಯಗಳ ನಿರ್ವಹಣೆಗಾಗಿ ಉಪನಿರ್ದೇಶಕರನ್ನು ನಿಯೋಜಿಸಬೇಕಾಗಿರುತ್ತದೆ. ಆದುದರಿಂದ, ಡಾ. ಕೆ. ಇ. ಶ್ರೀವೆಂಕಟನಾಥನ್, ಸಹಾಯಕ ಪ್ರಾಧ್ಯಾಪಕರು, ನ್ಯಾಯ & ವೈಶೇಷಿಕ ವಿಭಾಗ, ಕ.ಸಂ.ವಿ. ಇವರನ್ನು ತಾತ್ಕಾಲಿಕವಾಗಿ ಉಪನಿರ್ದೇಶಕರನ್ನಾಗಿ ಮತ್ತು ಶ್ರೀ ರಮೇಶ ಪುಟ್ಟಣ್ಣನವರ, ಸಹಾಯಕ ಗ್ರಂಥಪಾಲಕರು, ಕ.ಸಂ.ವಿ ಇವರನ್ನು ತಾತ್ಕಾಲಿಕವಾಗಿ ಸಹಾಯಕ ನಿರ್ದೇಶಕರನ್ನಾಗಿ ನಿಯೋಜಿಸಲು ಪ್ರಶಾಸನ ಸಮಿತಿಯ ಅನುಮತಿಗಾಗಿ ಮಂಡಿಸಿದೆ. |
| ನಿರ್ಣಯ | **ಅಧ್ಯಯನಾಂಗದ ಪಿಎಚ್.ಡಿ. ವಿಭಾಗಕ್ಕೆ ತಾತ್ಕಾಲಿಕವಾಗಿ ಮತ್ತು ಯಾವುದೇ ಆರ್ಥಿಕ ಸೌಲಭ್ಯವಿಲ್ಲದೇ ಹಾಲಿ ನಿರ್ವಹಿಸುತ್ತಿರುವ ಕಾರ್ಯಭಾರದ ಜೊತೆಗೆ ಡಾ. ಕೆ. ಇ. ಶ್ರೀವೆಂಕಟನಾಥನ್, ಸಹಾಯಕ ಪ್ರಾಧ್ಯಾಪಕರು, ನ್ಯಾಯ & ವೈಶೇಷಿಕ ವಿಭಾಗ, ಕ.ಸಂ.ವಿ. ಇವರನ್ನು ಉಪನಿರ್ದೇಶಕರನ್ನಾಗಿ ಹಾಗೂ ಶ್ರೀ ರಮೇಶ ಪುಟ್ಟಣ್ಣನವರ, ಸಹಾಯಕ ಗ್ರಂಥಪಾಲಕರು, ಕ.ಸಂ.ವಿ ಇವರನ್ನು ಸಹಾಯಕ ನಿರ್ದೇಶಕರನ್ನಾಗಿ ನಿಯೋಜಿಸಲು ಸಭೆಯು ಅನುಮೋದಿಸಿತು.** |
| **ವಿಷಯ: 07** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಬಿ.ಇಡಿ. ಕಾಲೇಜನ್ನು ಪ್ರಾರಂಭಿಸುವ ಬಗೆಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2025–26ನೇ ಸಾಲಿನಿಂದ ಸಂಸ್ಕೃತ ಬಿ.ಇಡಿ. ಕಾಲೇಜನ್ನು ಪ್ರಾರಂಭಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ಕಾಲೇಜನ್ನು ತಿಪ್ಪಸಂದ್ರದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಕಟ್ಟಡದಲ್ಲಿ ಪ್ರಾರಂಭಿಸಲಾಗುತ್ತಿದೆ. ವಿಶ್ವವಿದ್ಯಾಲಯದ ಬಿ.ಇಡಿ. ಕಾಲೇಜನ್ನು ಪ್ರಾರಂಭಿಸಲು ಪ್ರಶಾಸನ ಸಮಿತಿಯ ಅನುಮತಿಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಸಂಸ್ಕೃತ ವಿದ್ಯಾರ್ಥಿಗಳಿಗೆ ಬಿ.ಇಡಿ. ಪದವಿ ಪಡೆಯಲು ಅವಕಾಶದ ಕೊರತೆಯಿರುವುದನ್ನು ಮಾನ್ಯ ಸದಸ್ಯರು ತಿಳಿಸಿದರು. ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯ, ತಿರುಪತಿ ಇಲ್ಲಿ ಸಂಸ್ಕೃತ ಬಿ.ಇಡಿ. ಮತ್ತು ಎಮ್. ಇಡಿ. ಪದವಿಗಳಿವೆ. ವಿಶ್ವವಿದ್ಯಾಲಯದಲ್ಲಿ ಬಿ.ಇಡಿ. ಕೋರ್ಸಿಗೆ ಅಧ್ಯಾಪಕರ ಕೊರತೆಯೂ ಇದೆ. ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯ, ತಿರುಪತಿ ಇದರಡಿಯಲ್ಲಿಯೇ ಬಿ.ಇಡಿ. ಕೋರ್ಸ್ ನಡೆಸುವ ಸಾಧ್ಯತೆಗಳನ್ನು ಪರಿಶೀಲಿಸಬಹುದಾಗಿದೆ. ಆದ್ದರಿಂದ ಈ ಬಗ್ಗೆ ಅಧ್ಯಯನ ನಡೆಸಲು ಈ ಕೆಳಗಿನಂತೆ ಸಮಿತಿ ರಚಿಸಬಹುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.**<br>**1. ನಿರ್ದೇಶಕರು, ಅಧ್ಯಯನಾಂಗ, ಕ.ಸಂ.ವಿ. – ಅಧ್ಯಕ್ಷರು**<br>**2. ಡೀನ್, ಶಿಕ್ಷಣ ನಿಕಾಯ, ಕ.ಸಂ.ವಿ. – ಸದಸ್ಯರು**<br>**3. ಶ್ರೀ ನಾರಾಯಣ ಯಾಜಿ – ಸದಸ್ಯರು**<br>ಪ್ರಶಾಸನ ಸಮಿತಿ ಸದಸ್ಯರು, ಕ.ಸಂ.ವಿ.<br>**4. ಕುಲಸಚಿವರು(ಮೌ), ಕ.ಸಂ.ವಿ. – ಕಾರ್ಯದರ್ಶಿ** |

| | |
|---|---|
| | ಈ ಮೇಲಿನಂತೆ ಸಮಿತಿಯನ್ನು ರಚಿಸಿ, ಸಮಿತಿಯು ಶೀಘ್ರವಾಗಿ ವಿಶ್ವವಿದ್ಯಾಲಯಕ್ಕೆ ವರದಿಯನ್ನು ನೀಡಬೇಕೆಂದು ತೀರ್ಮಾನಿಸಲಾಯಿತು. |
| ವಿಷಯ: 07 | **Micro Teaching Methodology ಬಗ್ಗೆ ಡಾ. ಮುನೀರ್ ಅಹಮ್ಮದ್, ಪ್ರಶಾಸನ ಸಮಿತಿಯ ಸದಸ್ಯರು, ಕ.ಸಂ.ವಿ ಇವರಿಂದ Faculty Development Programme ಆಯೋಜಿಸುವ ಬಗ್ಗೆ.** |
| **ಟಿಪ್ಪಣಿ** | ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ. ನಿಯಮಾನುಸಾರ Faculty Development Programme ನಡೆಯುತ್ತದೆ. ವಿಶ್ವವಿದ್ಯಾಲಯದಡಿಯಲ್ಲಿ 31 ಸಂಯೋಜಿತ ಕಾಲೇಜುಗಳಿದ್ದು ಇವುಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಕಾಲೇಜಿನಲ್ಲಿ ನುರಿತ ಬೋಧಕರು ಪಾಠ-ಪ್ರವಚನ ನಡೆಸುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಪುನಶ್ಚೇತನ ಶಿಬಿರ ಮೊದಲಾದವನ್ನು ಕಾಲಕಾಲಕ್ಕೆ ನಡೆಸಲಾಗುತ್ತಿದೆ. ಅದರಂತೆ, ಸಂಯೋಜಿತ ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ Faculty Development Program ನಡೆಸಲು ಈಗಾಗಲೇ ಅನುಮೋದನೆ ಪಡೆಯಲಾಗಿದ್ದು, Micro Teaching Methodology ಬಗ್ಗೆ ಡಾ. ಮುನೀರ್ ಅಹಮ್ಮದ್, ಪ್ರಶಾಸನ ಸಮಿತಿಯ ಸದಸ್ಯರು, ಕ.ಸಂ.ವಿ ಇವರಿಂದ Faculty Development Programme ಆಯೋಜಿಸುವ ಬಗ್ಗೆ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **Micro Teaching Methodology ಬಗ್ಗೆ ಡಾ. ಮುನೀರ್ ಅಹಮ್ಮದ್, ಪ್ರಶಾಸನ ಸಮಿತಿಯ ಸದಸ್ಯರು, ಕ.ಸಂ.ವಿ ಇವರಿಂದ Faculty Development Programme ಆಯೋಜಿಸಲು ಸಭೆಯು ಅನುಮೋದಿಸಿತು.** |

ಮಾನ್ಯ ಸದಸ್ಯರಾದ ಡಾ. ಬಂಗಾರಮ್ಮ, ಕೆ. ಇವರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ. ಇದರಿಂದ ಸಂಸ್ಕೃತಾಧ್ಯಯನ ಮಾಡಿದವರಿಗೆ ಉದ್ಯೋಗಾವಕಾಶದ ಕೊರತೆಯಾಗುತ್ತಿದೆ. ಆದ್ದರಿಂದ ಈ ಬಗ್ಗೆ ವಿಶ್ವವಿದ್ಯಾಲಯದಿಂದ ಪ್ರಯತ್ನವಾಗಬೇಕು ಎಂದು ಸಲಹೆ ನೀಡಿದರು.

ಮಾನ್ಯ ಸದಸ್ಯರಾದ ಶ್ರೀ ಹನುಮಂತನಾಥ ಸ್ವಾಮೀಜಿ ಅವರು ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಬಿಡುವಿನ ಅವಧಿಯಲ್ಲಿ ಆಸಕ್ತ ವಿದ್ಯಾರ್ಥಿಗಳಿಗೆ ಸಂಸ್ಕೃತ ಪಾಠಶಾಲೆಗಳ ಶಿಕ್ಷಕರಿಂದ ಸಂಸ್ಕೃತ ಬೋಧನೆಗೆ ಅವಕಾಶ ನೀಡಿದರೆ ಸಂಸ್ಕೃತದ ಬೆಳವಣಿಗೆಗೆ ಉಪಯುಕ್ತವಾಗುತ್ತದೆ. ಈ ಬಗ್ಗೆ ಸುತ್ತೋಲೆ ಹೊರಡಿಸಲು ಕೋರಿ ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರಿಗೆ ಪತ್ರಿಸಬೇಕೆಂದು ಅಭಿಪ್ರಾಯಿಸಿದರು.

ವಿಶ್ವವಿದ್ಯಾಲಯದಿಂದ ಹಮ್ಮಿಕೊಳ್ಳಲಾದ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ಪ್ರಶಾಸನ ಸಮಿತಿಯ ಸದಸ್ಯರು ಪ್ರಶಂಸೆ ವ್ಯಕ್ತಪಡಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

**ಶ್ರೀ ವಿಶ್ವನಾಥ ಪಿ. ಹಿರೇಮಠ, ಕ.ಆ.ಸೇ.**
ಕುಲಸಚಿವರು
**ಸದಸ್ಯ ಕಾರ್ಯದರ್ಶಿಗಳು**

**ಡಾ. ಅಹಲ್ಯಾ ಎಸ್.**
ಕುಲಪತಿಗಳು
**ಅಧ್ಯಕ್ಷರು**